**ಮದ್ರಾಸಿನ ಸಂಗೀತ ಸಭೆ ಕಛೇರಿಗಳಿಗೆ ಪ್ರಸಿದ್ಧ ಹಾಡುಗಾರರನ್ನು ಆಹ್ವಾನಿಸುವಾಗ ಅವರಲ್ಲಿ ಬಹುಮಂದಿ ಚೌಡಯ್ಯನವರ ದಿನಾಂಕಗಳಿಗೆ ಹೊಂದಿಸಿಕೊಂಡು ಸಂಗೀತ ಕಚೇರಿಗಳನ್ನು ನೀಡಲು ಬಯಸುತ್ತಿರೆಂಬುದು ಚೌಡಯ್ಯನವರ ಮಹತ್ಸಾಧನೆ.**

ಹಾದು ಬಂದ ಸಂಗೀತ ಪಯಣದಲ್ಲಿ ಕಠಿಣ ಪರಿಶ್ರಮ. ದಣಿವರಿಯದ ಅಭ್ಯಾಸ. ನಿರಂತರ ಪ್ರಯೋಗ ಶೀಲತೆ ಎಲ್ಲವೂ ಇವೆ.

ಸಂಗೀತ ಪ್ರಿಯ ತಂದೆ ಅಗಸ್ತ್ಯ ಗೌಡರು, ನೃತ್ಯದಲ್ಲಿ ಆಸಕ್ತಿಯುಳ್ಳ ಸುಂದರಮ್ಮನವರ ಮಗ ಚೌಡಯ್ಯನವರಿಗೆ ಸಂಗೀತ ಶಿಕ್ಷಣ ಸಿಕ್ಕಿದ್ದು ಮೈಸೂರು ಆಸ್ಥಾನದಲ್ಲಿ ಪ್ರಸಿದ್ಧ ವಿದ್ವಾಂಸರಲ್ಲೊಬ್ಬರಾದ ಬಿಡಾರಂ ಕೃಷ್ಣಪ್ಪನವರಿಂದ. ಒಂದಲ್ಲ ಎರಡಲ್ಲ ಹದಿನೆಂಟು ವರ್ಷಗಳಷ್ಟು ದೀರ್ಘಕಾಲ ಗುರುಕುಲ ಪದ್ಧತಿಯಲ್ಲಿ ಪಿಟೀಲು ಕಲಿತವರು ಚೌಡಯ್ಯ.

ಅಪಾರ ಶ್ರದ್ಧೆ ಕಠಿಣ ಸಾಧನೆಯ ಮೂಲ ಪಿಟೀಲು ವಾದ್ಯದ ಮೇಲೆ ಹತೋಟಿ ಸಾಧಿಸಿದ ಟಿ. ಚೌಡಯ್ಯನವರು ಸ್ವತಂತ್ರ್ಯವಾಗಿ ಪಿಟೀಲು ಕಛೇರಿಗಳನ್ನು ನಡೆಸಲು ಆರಂಭಿಸಿದ್ದು 1026 ರಿಂದ. ಮೈಸೂರು ವಿದ್ವಾಂಸರೊಬ್ಬರು ಕರ್ನಾಟಕ ಸಂಗೀತ ಕ್ಷೇತ್ರಕ್ಕೆ ಹೊಸ ಹಾದಿಯನ್ನು ಸೃಷ್ಟಿಸುತ್ತಿದ್ದಾರೆಂಬ ಸಂಗೀತ ಅರಿಯಲು ಬಹಳ ಸಮಯವೇನೂ ಬೇಕಾಗಲಿಲ್ಲ.

ಆಗ ಪಿಟೀಲು ನಾಲ್ಕು ತಂತಿಗಳ ವಾದ್ಯ. ಆಗಿನ್ನೂ ಅದಕ್ಕೆ ವಿದ್ಯುತ್ ಸಂಪರ್ಕವೂ ಸಿಕ್ಕಿರಲಿಲ್ಲ. ಧ್ವನಿ ವರ್ಧಕಗಳ ಬಳಕೆಯೂ ಲಭಿಸಿರಲಿಲ್ಲ. ಸಭಾಂಗಣದಲ್ಲಿ ಕೊನೆಯ ಸಾಲಿನಲ್ಲಿ ಕುಳಿತು ಕೇಳುಗನಿಗೂ ಸಂಗೀತಸುಧೆ ಕೇಳುವಂತಿರಬೇಕೆಂಬ ಉದ್ದೇಶದಿಂದ ಚೌಡಯ್ಯ ಪಿಟೀಲು ವಾದ್ಯವನ್ನು ನಾಲ್ಕು ತಂತಿಗಳಿಂದ ಏಳು ತಂತಿಗಳಿಗೆ ಮಾರ್ಪಡಿಸಿ ಪ್ರಯೋಗಿಸಿದರು. ಗುರು ಬಿಡಾರಂ ಕೃಷ್ಣಪ್ಪನವರ ಜೊತೆಯಲ್ಲಿಯೇ ಪ್ರಯತ್ನ ಶುರುವಿಟ್ಟುಕೊಂಡಿದ್ದ ಚೌಡಯ್ಯ ಇದರಿಂದಲೇ ಪ್ರಸಿದ್ಧಿಗೆ ಬಂದರು.

ಸಂಗೀತ ಪಾಂಡಿತ್ಯದಲ್ಲಿ ಚೌಡಯ್ಯನವರಿಗೆ ಇದ್ದ ಅಪಾರ ಜ್ಞಾನವನ್ನು ಬಹುಬೇಗ ತಿಳಿದ ಕರ್ನಾಟಕ ಸಂಗೀತದ ಪ್ರಮುಖ ಗಾಯಕರೆಲ್ಲರೂ ಚೌಡಯ್ಯನವರ ಪಕ್ಕ ವಾದ್ಯಕ್ಕೆ ಹಾತೊರೆದಿದ್ದು ಆಗಿನ ಕಾಲಕ್ಕೆ ವಿಶೇಷವೆನ್ನಿಸಿತ್ತು.



ಚೆಂಬೈ ವೈದ್ಯನಾಥ ಭಾಗವತರ್, ಅರಿಯಾಕುಡಿ ರಾಮಾನುಜಯ್ಯಂಗಾರ್, ಜಿ.ಎನ್. ಬಾಲಸುಬ್ರಮಣ್ಯಂ, ಎಂ.ಎಸ್. ಸುಬ್ಬಲಕ್ಷ್ಮಿ, ಪಾಲಘಾಟ್ ರಾಮ ಭಾಗವತರ್, ಶೆಮ್ಮಂಗುಡಿ ಹೀಗೆ ಕರ್ನಾಟಕ ಸಂಗೀತದ ಘಟಾನುಘಟಿ ಗಾಯಕರೆಲ್ಲರಿಗೂ ಪಿಟೀಲು ಸಾಥ್ ಕೊಟ್ಟಿದ್ದು ಚೌಡಯ್ಯನವರ ಹೆಗ್ಗಳಿಕೆ.

ಮದ್ರಾಸಿನ ಸಂಗೀತ ಸಭೆ ಕಛೇರಿಗಳಿಗೆ ಪ್ರಸಿದ್ಧ ಹಾಡುಗಾರರನ್ನು ಆಹ್ವಾನಿಸುವಾಗ ಅವರಲ್ಲಿ ಬಹುಮಂದಿ ಚೌಡಯ್ಯನವರ ದಿನಾಂಕಗಳಿಗೆ ಹೊಂದಿಸಿಕೊಂಡು ಸಂಗೀತ ಕಚೇರಿಗಳನ್ನು ನೀಡಲು ಬಯಸುತ್ತಿರೆಂಬುದು ಚೌಡಯ್ಯನವರ ಇನ್ನೊಂದು ಮಹತ್ಸಾಧನೆ.

ಕರ್ನಾಟಕದ ಯಾವ ಸಂಗೀತಗಾರರೂ, ಪಕ್ಕ ವಾದ್ಯಗಾರರು ರಾಜ್ಯದ ಸರಹದ್ದಿನ ಆಚೆಗೆ ಚೌಡಯ್ಯನವರ ಮಟ್ಟಕ್ಕೆ ಏರಿದ್ದು ಆ ಕಾಲದಲ್ಲಂತೂ ಆಗಿರಲಿಲ್ಲ.

ಪಕ್ಕವಾದ್ಯದರಲ್ಲಿರಲಿ, ಸೋಲೋ ಆಗಿರಲಿ ಸಂಗೀತ ಕಛೇರಿಯನ್ನು ಕಳೆಗಟ್ಟಿಸುವ ವಿಶೇಷ ಸಂಗೀತ ಪ್ರಭೆ ಚೌಡಯ್ಯನವರಿಗಿತ್ತು ಎಂಬುದನ್ನು ಆಗಿನ ಕಾಲದ ಬಹಳಷ್ಟು ಹಾಡುಗಾರರು ಒಪ್ಪಿಕೊಂಡಿದ್ದರು.

ನಾಲ್ಕು ತಂತಿಗಳಿಂದ ಏಳು ತಂತಿಗಳಿಗೆ ಮಾರ್ಪಡಿಸಿದ ಪಿಟೀಲು ವಾದ್ಯವನ್ನು 19 ತಂತಿಗಳಿಗೂ ಆವಿಷ್ಕರಿಸಿದ ಚೌಡಯ್ಯ ನಾಡಿನುದ್ದಕ್ಕೂ ಸಂಗೀತಗಾರರ–ಸಂಗೀತ ಪ್ರೇಮಿಗಳ ಕಣ್ಮಣಿಯಾದರು. ಆ ಕಾಲದ ಹಲವು ಸಂಗೀತಗಾರರಂತೆ ಚಲನಚಿತ್ರ ಕ್ಷೇತ್ರಕ್ಕೂ ಕಾಲಿಟ್ಟ ಚೌಡಯ್ಯನವರು 'ವಾಣಿ ಕನ್ನಡ ಚಿತ್ರವನ್ನು ತಯಾರಿಸಿ ಅದರಲ್ಲಿ ಪ್ರಮುಖ ಪಾತ್ರ ವಹಿಸುವುದರ ಜೊತೆಗೆ ಸಂಗೀತ ನಿರ್ದೇಶನ ನೀಡಿದ್ದು ಮಗದೊಂದು ಇತಿಹಾಸ.

ನಾಡಿನ ಶ್ರೇಷ್ಠ ಪಿಟೀಲು ವಾದಕರಲ್ಲಿ ಅಗ್ರಸ್ಥಾನಕ್ಕೇರಿದ ಮೈಸೂರು ಟಿ. ಚೌಡಯ್ಯ 'ತ್ರಿ ಮುಕುಟ' ಎಂಬ ಹೆಸರಿನಿಂದ ಹಲವು ಸಂಗೀತ ಕೃತಿಗಳನ್ನು–ತಿಲ್ಲಾನಗಳನ್ನು ರಚಿಸಿ ಸಂಗೀತಗಾರರ ಮನಗೆದ್ದರು.

ತಮ್ಮ ಗುರು ಬಿಡಾರಂ ಕೃಷ್ಣಪ್ಪನವರ ಆಸೆಯಂತೆ ಅಯ್ಯನಾರ್ ಸಂಗೀತ ವಿದ್ಯಾಲಯವನ್ನು ಮೈಸೂರು ಬೆಂಗಳೂರುಗಳಲ್ಲಿ ಆರಂಭಿಸಿ ನೂರಾರು ವಿದ್ಯಾರ್ಥಿಗಳು ಪಿಟೀಲು, ಗಾಯನ, ವೀಣೆ ಹಾಗೂ ವೇಣು ವಾದನವನ್ನು ಕಲಿಯಲು ಅವಕಾಶ ಮಾಡಿಕೊಟ್ಟ ಚೌಡಯ್ಯ ಭಾರತ ಸರ್ಕಾರದಿಂದ ವಿದ್ಯಾರ್ಥಿ ವೇತನಗಳನ್ನು ದೊರೆಯುವಂತೆ ಮಾಡಿದ್ದರು. ಅಂಥ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದು ಚೌಡಯ್ಯನವರ ವಿಶೇಷತೆ.

ಕನ್ನಡ ಹಾಗೂ ಸಂಸ್ಕೃತದಲ್ಲಿ ಚೌಡಯ್ಯನವರು ರಚಿಸಿದ 50ಕ್ಕೂ ಹೆಚ್ಚು ವರ್ಣ, ಕೀರ್ತನೆ ಹಾಗೂ ತಿಲ್ಲಾನಗಳನ್ನು ಅವರ ಶಿಷ್ಯ ಹಾಗೂ ಅಯ್ಯನಾರ್ ಕಾಲೇಜು ಮುಖ್ಯಸ್ಥ ಮೈಸೂರು ವಿ. ರಾಮರತ್ನಂ ಸಂಪಾದಿಸಿದ್ದ ಕೃತಿಯನ್ನು ಮೈಸೂರು ವಿಶ್ವವಿದ್ಯಾಲಯ ಪ್ರಕಟಿಸಿತು.

ಪಿಟೀಲು ವಾದನದಲ್ಲಿ ಅದ್ವಿತೀಯರೆನ್ನಿಸಿಕೊಂಡು ಕರ್ನಾಟಕ ಸಂಗೀತ ಕ್ಷೇತ್ರದ ಶ್ರೇಷ್ಠರ ಸಾಲಿಗೆ ಸೇರಿದ ಮೈಸೂರು ಟಿ. ಚೌಡಯ್ಯನವರಿಗೆ 1941 ರಲ್ಲಿ ಮೈಸೂರು ಅರಸರು 'ಸಂಗೀತ ರತ್ನ' ಬಿರುದು ಕೊಟ್ಟರೆ ಕೇಂದ್ರ ಸರ್ಕಾರ 1957 ರಲ್ಲಿ ರಾಷ್ಟ್ರಪತಿಗಳ ಪ್ರಶಸ್ತಿ ನೀಡಿ ಗೌರವಿಸಿತು. ಮದ್ರಾಸಿನ ಸಂಗೀತ ಅಕಾಡೆಮಿಯ ಸಂಗೀತ ಕಲಾನಿಧಿ. ಮೈಸೂರು ಸಂಗೀತ ಪರಿಷತ್ತಿನ 'ಗಾನಕಲಾ ಸಿಂಧು' ಚೌಡಯ್ಯನವರಿಗೆ ಸಂದ ಪುರಸ್ಕಾರಗಳಲ್ಲಿ ಕೆಲವು.

ದಕ್ಷಿಣಾದಿ ಸಂಗೀತ ದಿಗಂತದಲ್ಲಿ ಕನ್ನಡನಾಡಿನ ಪ್ರೌಢಿಮೆಯನ್ನು ದಾಖಲು ಮಾಡಿದ ಮೈಸೂರು ಟಿ. ಚೌಡಯ್ಯನವರ ಸಾಧನೆಯ ಹೆಗ್ಗುರುತಾಗಿ ಮೈದಾಳಿರುವ ಬೆಂಗಳೂರಿನ ಪಿಟಲು ಆಕೃತಿಯ 'ಚೌಡಯ್ಯ ಸ್ಮಾರಕ ಭವನ' ಸಾಂಸ್ಕೃತಿಕ ಜಗತ್ತಿನ ಬೆಳ್ಳಿಚುಕ್ಕಿ.

ತಾವೇ ರಚಿಸಿ ತಾವೇ ಪಿಟೀಲಿನಲ್ಲಿ ನುಡಿಸಿರುವ ಚೌಡಯ್ಯನವರ ಸಿ.ಡಿ.ಯೊಂದು ಇತ್ತೀಚೆಗೆ ಸಿದ್ಧಗೊಂಡಿದ್ದು ಚೌಡಯ್ಯ ಬದುಕು–ಸಾಧನೆ ಕುರಿತ ಸಾಕ್ಷ್ಯಚಿತ್ರ (ನಿರ್ಮಾಣ ಕರ್ನಾಟಕ ವಾರ್ತಾ ಇಲಾಖೆ) ತಯಾರಾಗಿದೆ.